2016 ಕ.ತೀ.ವ. 1016

(ಕಲಬುರಗಿ ಪೀಠ)

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ಎನ್. ವೇಣುಗೋಪಾಲಗೌಡ

ಶರಣಬಸಪ್ಪ –ವಿರುದ್ಧ– ಉಮೇಶ್ *

ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957 – ಪ್ರಕರಣ 33 ಮತ್ತು 34

ಸಾಕಷ್ಟು ಸ್ಟ್ಯಾಂಪು ಹಾಕಿರದ ದಸ್ತಾವೇಜು – ಸಾಕಷ್ಟು ಸ್ಟ್ಯಾಂಪು ಹಾಕಿರದ ದಸ್ತಾವೇಜನ್ನು ಸಾಕ್ಷ್ಯವನ್ನಾಗಿ ಹಾಜರುಪಡಿಸಿರುವುದು – ದಸ್ತಾವೇಜಿನ ಅಂಗೀಕಾರಾರ್ಹತೆಗೆ ಸಂಬಂಧಿಸಿದಂತೆ ಎತ್ತಲಾದ ಆಕ್ಷೇಪಣೆಗಳು – ನ್ಯಾಯಾಲಯವು ಆಕ್ಷೇಪಣೆಗಳನ್ನು ಪರಿಗಣಿಸದಿರುವುದು – "ನ್ಯಾಯಾಲಯದ ಕಾರ್ಯದಿಂದ ಯಾರಿಗೂ ಬಾಧೆಯುಂಟಾಗತಕ್ಕುದಲ್ಲ" – ಆಕ್ಷೇಪಣೆಯನ್ನು ಪರಿಗಣಿಸದಿರುವುದು ಮತ್ತು ಅದನ್ನು ಅಂಗೀಕರಿಸುವ ಹಂತದಲ್ಲಿ ದಸ್ತಾವೇಜನ್ನು ಗುರುತು ಮಾಡುವುದು ನ್ಯಾಯಾಲಯದ ತಪ್ಪಾಗಿದೆ ಹಾಗೂ ಅದಕ್ಕಾಗಿ ವ್ಯಾಜ್ಯಕಾರರು ತೊಂದರೆ ಅನುಭವಿಸುವಂತೆ ಮಾಡಕೂಡದು ಎಂದು ಈ ನ್ಯಾಯಾಲಯವು ತೀರ್ಮಾನಿಸಿದೆ.

ದಸ್ತಾವೇಜಿಗೆ ಯುಕ್ತವಾಗಿ ಸ್ಟ್ಯಾಂಪು ಹಾಕಿಲ್ಲವೆಂಬ ಕಾರಣದ ಮೇಲೆ ದಸ್ತಾವೇಜಿನ ಅಂಗೀಕಾರಾರ್ಹತೆಗೆ ಸಂಬಂಧಿಸಿದಂತೆ ಆಕ್ಷೇಪಣೆ ಎತ್ತಿದಲ್ಲಿ, ಆಗಲೇ ಮತ್ತು ಅಲ್ಲೇ ಆಕ್ಷೇಪಣೆಯನ್ನು ನ್ಯಾಯಿಕವಾಗಿ ನಿರ್ಧರಿಸುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆಯೆಂದು ಸ್ಪಷ್ಟವಾಗಿದೆ. ಒಂದು ವೇಳೆ ದಸ್ತಾವೇಜನ್ನು, ತಪ್ಪಾಗಿ, ಗುರುತು ಮಾಡಿದ್ದರೂ ಸಹ, ಆಕ್ಷೇಪಣೆಗೊಳಪಟ್ಟಂತೆ, ಆ ದಸ್ತಾವೇಜನ್ನು ತಾತ್ಕಾಲಿಕವಾಗಿ ಗುರುತು ಮಾಡಲಾಗಿದೆಯೆಂದು ಅರ್ಥೈಸತಕ್ಕದ್ದು ಮತ್ತು ಗುರುತು ಮಾಡಿದ್ದಕ್ಕಾಗಿ ಮಾಡಲಾದ ಆಕ್ಷೇಪಣೆಯನ್ನು ನ್ಯಾಯಿಕವಾಗಿ ನಿರ್ಣಯಿಸಲಾಗಿಲ್ಲವೆಂದು ಹಾಗೂ ನ್ಯಾಯಾಲಯದ ತಪ್ಪಿಗಾಗಿ, ಯಾರೇ ಪಕ್ಷಕಾರರಿಗೆ

* ನಿಯತ ಎರಡನೇ ಅಪೀಲು ಸಂಖ್ಯೆ: 7136/2013, ದಿನಾಂಕ: 27ನೇ ನವೆಂಬರ್, 2015.

ತೊಂದರೆ ಮಾಡತಕ್ಕದ್ದಲ್ಲವೆಂದು ಹಾಗೂ ಅದನ್ನು ವಿಳಂಬ ಮಾಡದೆ ನಿರ್ಧರಿಸಲು ಅಗತ್ಯಪಡಿಸಲಾಗಿದೆಯೆಂದು ಹಾಗೂ ಯಾವುದೇ ಸಂದರ್ಭದಲ್ಲಿಯೂ ದಾವೆಯು ನಿರ್ಧಾರವಾಗುವುದಕ್ಕೆ ಮುಂಚೆಯೇ ಅದನ್ನು ನಿರ್ಧರಿಸತಕ್ಕದ್ದೆಂದು ಅರ್ಥೈಸಬೇಕು. ವಿಖ್ಯಾತ ಕಾನೂನು ಸೂತ್ರವಾದ 'ನ್ಯಾಯಾಲಯದ ಕಾರ್ಯದಿಂದ ಯಾರಿಗೂ ಬಾಧೆಯುಂಟಾಗತಕ್ಕುದಲ್ಲ' ಎಂಬುದನ್ನು ಗಮನದಲ್ಲಿಡತಕ್ಕದ್ದು.

ಅಧಿನಿಯಮದ 33ನೇ ಪ್ರಕರಣವು ಯುಕ್ತವಾಗಿ ಸ್ಟ್ಯಾಂಪು ಹಾಕಿರದ ಪತ್ರದ ಪರಿಶೀಲನೆಗಾಗಿ ಮತ್ತು ಪರಿಬದ್ಧಗೊಳಿಸುವಿಕೆಗಾಗಿ ಉಪಬಂಧಿಸುತ್ತದೆ. ಒಮ್ಮೆ ಪರಿಶೀಲನೆಯಲ್ಲಿ, ಪತ್ರಕ್ಕೆ ಯುಕ್ತ ಸ್ಟ್ಯಾಂಪನ್ನು ಹಾಕಿಲ್ಲವೆಂದು ಕಂಡುಬಂದಿದ್ದಲ್ಲಿ, 34ನೇ ಪ್ರಕರಣವು ಜಾರಿಗೆ ಬರುತ್ತದೆ ಮತ್ತು ಸಾಕ್ಷ್ಯದಲ್ಲಿ ಅಂಥ ಪತ್ರದ ಅಂಗೀಕಾರಾರ್ಹತೆಯ ಮೇಲೆ ಸಂಪೂರ್ಣ ಪ್ರತಿಬಂಧಕಾಜ್ಞೆಯನ್ನು ಹೊರಡಿಸುತ್ತದೆ. ಅಧಿವಿಚಾರಣಾ ನ್ಯಾಯಾಧೀಶರು ಪ್ರತಿವಾದಿಯಿಂದ ಎತ್ತಲಾದ ಆಕ್ಷೇಪಣೆಗೆ ಎದುರಾಗಿ ದಾವೆಯ ದಸ್ತಾವೇಜನ್ನು ನಿಶಾನೆ ಪಿ.1 ಎಂಬುದಾಗಿ ಅಂಗೀಕರಿಸಬಾರದಾಗಿತ್ತು. ಎತ್ತಲಾದ ಆಕ್ಷೇಪಣೆಯನ್ನು ಆಗಲೇ ಮತ್ತು ಅಲ್ಲೇ ನಿರ್ಧರಿಸಿರಬೇಕಿತ್ತು.

ಸಾಕ್ಷ್ಯವನ್ನಾಗಿ ನೀಡಿದ ಲಿಖಿತವನ್ನು ಪರಿಶೀಲಿಸುವ ಮತ್ತು ಪರಿಬದ್ಧಗೊಳಿಸುವ ವಿಷಯದಲ್ಲಿ ಅಧಿವಿಚಾರಣಾ ನ್ಯಾಯಾಧೀಶರಿಗೆ ವಹಿಸಿರುವ ಶಾಸನಬದ್ಧ ಕರ್ತವ್ಯವೆಂದರೆ, ಅದನ್ನು ಸಾಕ್ಷ್ಯವನ್ನಾಗಿ ಸ್ವೀಕರಿಸುವುದಕ್ಕೆ ಮುಂಚೆ, ಪ್ರತಿವಾದಿಯು ಆಕ್ಷೇಪಣೆ ಎತ್ತಿದ್ದರೂ, ಅಂದರೆ, ಅದಕ್ಕೆ ಸಾಕಷ್ಟು ಸ್ಟ್ಯಾಂಪನ್ನು ಹಾಕಿಲ್ಲವೆಂಬ ಆಧಾರದ ಮೇಲೆ ಅದನ್ನು ಗುರುತು ಮಾಡಿರುವ ಬಗ್ಗೆ, ಅದು ಪರಿಬದ್ಧಗೊಳಿಸಲು ತಕ್ಕುದಾಗಿದ್ದು, ಹೊಣೆಯಿಂದ ವಿಮೋಚನೆಗೊಳಿಸಿರುವುದಿಲ್ಲ. ಕನಿಷ್ಠಪಕ್ಷ ದಾವೆಯ ತರುವಾಯದ ಹಂತದಲ್ಲಾದರೂ ಆಕ್ಷೇಪಣೆಯನ್ನು ನಿರ್ಧರಿಸದೆ, ಮತ್ತು ಆಕ್ಷೇಪಿತ ದಸ್ತಾವೇಜಿನ ಮೇಲೆ ಮಾತ್ರವೇ ಅವಲಂಬಿಸಿದ್ದು, ನಿಶಾನೆ ಪಿ1 ಎಂಬುದಾಗಿ ಗುರುತಿಸಲಾಗಿದ್ದು, ದಾವೆಯನ್ನು ಡಿಕ್ರಿಗೊಳಿಸಲಾಗಿದೆ ಹಾಗೂ ಆದುದರಿಂದ, ಅಧಿನಿಯಮದ 34ನೇ ಪ್ರಕರಣದ ಉಲ್ಲಂಘನೆಯಾಗಿದೆ. – ಅಧಿವಿಚಾರಣಾ ನ್ಯಾಯಾಲಯ ಹಾಗೂ ಕೆಳ ಅಪೀಲು

**ನ್ಯಾಯಾಲಯ – ಇವೆರಡೂ ಈ ಪ್ರಕರಣದಲ್ಲಿ ಗಂಭೀರ ತಪ್ಪನ್ನು ಎಸಗಿವೆ – ಸಿವಿಲ್ ಪ್ರಕ್ರಿಯಾ ಸಂಹಿತೆ, 1908 – ಪ್ರಕರಣ 100 – ನಿಯತ ಎರಡನೇ ಅಪೀಲು – ಚರ್ಚಿಸಲಾಗಿದೆ.**

**ನಿಯತ ಎರಡನೇ ಅಪೀಲನ್ನು ಪುರಸ್ಕರಿಸಲಾಗಿದೆ.**

| ***ಉಲ್ಲೇಖಿಸಲಾದ ಮೊಕದ್ದಮೆಗಳು:*** | ***ಪ್ಯಾರಾಗಳಲ್ಲಿ*** |
|---|---|
| *1. ಎಐಆರ್ 1961 ಎಸ್‌ಸಿ 1655 ಜಿವೇರ್ ಚಂದ್ ಮತ್ತು ಇತರರು –ವಿರುದ್ಧ– ಪುಖ್‌ರಾಜ್ ಸುರಾನಾ* | *(ಉಲ್ಲೇ) 7* |
| *2. (1978) 3 ಎಸ್‌ಸಿಸಿ 236 ರಾಮ್ ರತನ್ (ಮೃತ) ಕಾನೂನು ಪ್ರತಿನಿಧಿಗಳು –ವಿರುದ್ಧ– ಭಜರಂಗ್‌ಲಾಲ್ ಮತ್ತು ಇತರರು* | *(ಉಲ್ಲೇ) 7* |
| *3. ಐಎಲ್‌ಆರ್ 2002 ಕೆಎಆರ್ 3369 ರಿಯಾಜ್‌ಖಾನ್ ಮತ್ತು ಇತರರು –ವಿರುದ್ಧ– ಮೋದಿ ಮಹಮದ್ ಇಸ್ಮೈಲ್ ಮತ್ತು ಇತರರು* | *(ಉಲ್ಲೇ) 8* |
| *4. (2013) 4 ಕೆಎಲ್‌ಜೆ 247 ದಿಗಂಬರ್‌ವರ್ತಿ –ವಿರುದ್ಧ– ಜಿಲ್ಲಾ ರಿಜಿಸ್ಟ್ರಾರ್, ಬೆಂಗಳೂರು ನಗರ ಜಿಲ್ಲೆ* | *(ಉಲ್ಲೇ) 14* |

ಅಪೀಲುದಾರರ ಪರ: ಶ್ರೀ ಎ.ಸೈಯದ್ ಹಬೀಬ್, ವಕೀಲರು,
ಪ್ರತ್ಯಪೀಲುದಾರರ ಪರ: ಶ್ರೀ ಅಶೋಕ್ ಎಸ್. ಕಿಣಗಿ, ವಕೀಲರು.

**ತೀರ್ಪು**

**ನ್ಯಾಯಮೂರ್ತಿ ಶ್ರೀ ವೇಣುಗೋಪಾಲಗೌಡ** :

ಇದು ದಿನಾಂಕ 11.05.2007ರ ಕೈಸಾಲ ಒಪ್ಪಂದದ ಆಧಾರದ ಮೇಲೆ ಹಣ ವಸೂಲಿಗಾಗಿ ಹೂಡಲಾದ ದಾವೆಯಿಂದ ಉಂಟಾದ ಪ್ರತಿವಾದಿಯ ಅಪೀಲಾಗಿದೆ. ಪ್ರತ್ಯಪೀಲುದಾರನು, ಸಾಲ ಮತ್ತು ವೆಚ್ಚಗಳ ದಿನಾಂಕದಿಂದ ಶೇ.18ರಷ್ಟು ಬಡ್ಡಿಯೊಂದಿಗೆ ರೂ.2,71,000/–ಗಳ ವಸೂಲಿಗಾಗಿ ಡಿಕ್ರಿ ಹೊರಡಿಸಲು ದಾವೆ ಹೂಡಿದ್ದಾನೆ. ದಾವೆಯನ್ನು ವಿವಿಧ ಆಧಾರಗಳ ಮೇಲೆ ವಿರೋಧಿಸಲಾಯಿತು. 4 ವಿವಾದಗಳನ್ನು ಎತ್ತಲಾಯಿತು. ಅಧಿವಿಚಾರಣಾ ಅವಧಿಯಲ್ಲಿ ದಾವೆಯ ದಸ್ತಾವೇಜು – ದಿನಾಂಕ 11.05.2007ರ ಕೈಸಾಲ ಒಪ್ಪಂದವನ್ನು ಹಾಜರುಪಡಿಸಲಾಯಿತು. ದಾವೆಯ ದಸ್ತಾವೇಜನ್ನು ಅದಕ್ಕೆ ಸಾಕಷ್ಟು ಸ್ಟ್ಯಾಂಪ್ ಹಾಕಿಲ್ಲವೆಂದು ಹಾಗೂ ಅದು ಪರಿಬದ್ಧಗೊಳಿಸಲು ತಕ್ಕುದಾಗಿದೆಯೆಂಬ ಆಧಾರದ ಮೇಲೆ ದಾವೆಯ ದಸ್ತಾವೇಜು ಗುರುತಿಸುವಿಕೆಯನ್ನು ಆಕ್ಷೇಪಿಸಲಾಯಿತು. ಸದರಿ ದಸ್ತಾವೇಜನ್ನು ಆಕ್ಷೇಪಣೆಗೊಳಪಟ್ಟು ಗುರುತು ಮಾಡಲಾಯಿತು. ಅಧಿವಿಚಾರಣೆಯ ಮುಕ್ತಾಯದಲ್ಲಿ, ಸದರಿ ದಸ್ತಾವೇಜಿನ ಮೇಲೆ ಎತ್ತಲಾದ ಆಕ್ಷೇಪಣೆಯನ್ನು ನಿರ್ಧರಿಸದೆ, ದಾವೆಯನ್ನು ಡಿಕ್ರಿಗೊಳಿಸಲಾಯಿತು ಮತ್ತು ಸಾಲದ ಲಭ್ಯತೆಯ ದಿನಾಂಕದಿಂದ, ವಸೂಲಿನ ದಿನಾಂಕದವರೆಗೆ, ವಾರ್ಷಿಕ ಶೇ.6ರಷ್ಟು ಬಡ್ಡಿಯೊಂದಿಗೆ ರೂ.2,71,000/–ಗಳನ್ನು ವಾದಿಗೆ ಪಾವತಿಸಲು ಪ್ರತಿವಾದಿಗೆ ನಿರ್ದೇಶಿಸಲಾಯಿತು.

2. ಅಧಿವಿಚಾರಣಾ ನ್ಯಾಯಾಧೀಶರು ಸದರಿ ದಸ್ತಾವೇಜನ್ನು ಸ್ವೀಕರಿಸಬಾರದಿತ್ತು ಹಾಗೂ ನಿಶಾನೆ ಪಿ.1ರಲ್ಲಿರುವಂತೆ ಅಂಗೀಕರಿಸಬಾರದಿತ್ತೆಂದು ಇತರ ವಿಷಯಗಳೊಂದಿಗೆ ವಾದಿಸಿ, ಡಿಕ್ರಿಯನ್ನು ಖಂಡಿಸಿ, ಪ್ರತಿವಾದಿಯು ಅಪೀಲು ಸಲ್ಲಿಸಿರುತ್ತಾನೆ. ದಾವೆಯ ದಸ್ತಾವೇಜನ್ನು 'ಆಕ್ಷೇಪಣೆಗೊಳಪಟ್ಟು' ಗುರುತಿಸಲಾಗಿರುವುದರಿಂದಾಗಿ, ಹೊರಡಿಸಿರುವ ಡಿಕ್ರಿಯು ಕಾನೂನುಬಾಹಿರವಾದದ್ದೆಂದು ವಾದಿಸಲಾಯಿತು. ಪರ ವಿರೋಧ ವಾದಗಳನ್ನು ಪರಿಗಣಿಸಿ, ಮೂರು ಅಂಶಗಳನ್ನು

ಗಣನೆಗೆ ತೆಗೆದುಕೊಳ್ಳಲಾಯಿತು. ಹಾಗಿದ್ದರೂ, ಮೇಲೆ ಹೇಳಲಾದ ಮುಖ್ಯ ಆಧಾರಕ್ಕೆ ಸಂಬಂಧಿಸಿ ಯಾವುದೇ ಅಂಶವನ್ನು ಮಂಡಿಸಿರುವುದಿಲ್ಲ. ಎತ್ತಲಾದ ಆಕ್ಷೇಪಣೆಯನ್ನು ಮೊದಲು ಎಂದರೆ, ದಸ್ತಾವೇಜನ್ನು ಅಂಗೀಕರಿಸುವುದಕ್ಕೆ ಮುಂಚೆ ನಿರ್ಧರಿಸಬೇಕೆಂದು ಅಭಿಪ್ರಾಯಪಟ್ಟಿದ್ದರೂ ಸಹ, ದಸ್ತಾವೇಜನ್ನು ಗುರುತು ಮಾಡುವಾಗ ಆಕ್ಷೇಪಣೆ ಎತ್ತಲಾಗಿಲ್ಲವೆಂದು ದೋಷಪೂರ್ಣವಾಗಿ ಮುಕ್ತಾಯಗೊಳಿಸಲಾಯಿತು. ಸದರಿ ನಿರ್ಣಯವು, ದಾಖಲೆಗೆ ವಿರುದ್ಧವಾಗಿರುವುದರಿಂದ ದುರುಪಯೋಗವಾಗಿದೆ. ಅಪೀಲನ್ನು ಭಾಗಶಃ ಪುರಸ್ಕರಿಸಲಾಯಿತು ಮತ್ತು ದಾವೆಯ ದಿನಾಂಕದಿಂದ ವಸೂಲಿಯವರೆಗೆ ವಾರ್ಷಿಕ ಶೇ.6ರ ಬಡ್ಡಿಯೊಂದಿಗೆ ಪಾವತಿಸಲು ವಾದಿಯನ್ನು ಹಕ್ಕುಳ್ಳವನನ್ನಾಗಿಸಿ, ಪ್ರಶ್ನಿತ ಡಿಕ್ರಿಯನ್ನು ಮಾರ್ಪಾಡು ಮಾಡಲಾಯಿತು.

3. ದಾವೆಯ ದಸ್ತಾವೇಜನ್ನು ಸಾಕ್ಷ್ಯವನ್ನಾಗಿ ಸ್ವೀಕರಿಸುವ ಮತ್ತು ಅದನ್ನು ನಿಶಾನೆ ಪಿ1 ಎಂದು ಗುರುತು ಮಾಡುವ ವಿಷಯದಲ್ಲಿ ಎಸಗಲಾದ ಕಾನೂನುಬಾಹಿರತೆಗೆ ಸಂಬಂಧಿಸಿದಂತೆ ಕಾನೂನಿನ ಗಣನಾರ್ಹ ಪ್ರಶ್ನೆಯನ್ನು ಎತ್ತುವ ಮೂಲಕ ಸದರಿ ಡಿಕ್ರಿಯನ್ನು ಬದಿಗಿರಿಸಲು ಈ ಎರಡನೇ ಅಪೀಲನ್ನು ಹೂಡಲಾಯಿತು.

4. ಪರ ವಿರೋಧದ ವಾದಗಳನ್ನು ಮತ್ತು ಮೊಕದ್ದಮೆಯ ದಾಖಲೆಯನ್ನು ಪರಿಗಣಿಸಿ, ಈ ಮುಂದಿನ ಗಣನಾರ್ಹ ಕಾನೂನಿನ ಪ್ರಶ್ನೆಯನ್ನು ಪರ್ಯಾಲೋಚನೆಗಾಗಿ ತೆಗೆದುಕೊಳ್ಳಲಾಗಿದೆ:

> "ದಾವೆಯನ್ನು ಸಾಕ್ಷ್ಯವಾಗಿ ಸ್ವೀಕರಿಸುವ ಮತ್ತು ಅಂಗೀಕರಿಸುವ ವಿಷಯದಲ್ಲಿ ಹಾಗೂ ಪ್ರಶ್ನಿತ ಡಿಕ್ರಿಗಳನ್ನು ಹೊರಡಿಸುವಲ್ಲಿ, ಕರ್ನಾಟಕ ಸ್ಟ್ಯಾಂಪು ಅಧಿನಿಯಮ, 1957ರ (ಸಂಕ್ಷಿಪ್ತವಾಗಿ ಅಧಿನಿಯಮ) 33 ಮತ್ತು 34ನೇ ಪ್ರಕರಣಗಳ ಅನುಸಾರ, ಉಪಬಂಧಗಳ ಉಲ್ಲಂಘನೆಯಾಗಿದೆಯೇ?"

5. ಮಾನ್ಯ ವಕೀಲರುಗಳ ಒಪ್ಪಿಗೆಯೊಂದಿಗೆ, ಪೇಪರ್ ಬುಕ್‌ನಲ್ಲಿ ದಾಖಲಿಸುವುದರಿಂದ ವಿನಾಯಿತಿಗೊಳಿಸುವ ಮೂಲಕ ಅಪೀಲನ್ನು ಅಂತಿಮ ಸುನಾವಣೆಗೆ ತೆಗೆದುಕೊಳ್ಳಲಾಗಿದೆ. ಪಕ್ಷಕಾರರ ಪರ ಹಾಜರಾದ ಮಾನ್ಯ ವಕೀಲರುಗಳ ವಾದಗಳನ್ನು ಆಲಿಸಲಾಗಿದೆ ಹಾಗೂ ದಾಖಲೆಯನ್ನು ಅವಗಾಹಿಸಲಾಗಿದೆ.

6. ಅಧಿನಿಯಮದ 33ನೇ ಪ್ರಕರಣವು ಯುಕ್ತವಾಗಿ ಸ್ಟ್ಯಾಂಪು ಹಾಕಿರದ ಪತ್ರದ ಪರಿಶೀಲನೆಗಾಗಿ ಮತ್ತು ಪರಿಬದ್ಧಗೊಳಿಸುವಿಕೆಗಾಗಿ ಉಪಬಂಧಿಸುತ್ತದೆ. ಒಮ್ಮೆ ಪರಿಶೀಲನೆಯಲ್ಲಿ, ಪತ್ರಕ್ಕೆ ಯುಕ್ತ ಸ್ಟ್ಯಾಂಪನ್ನು ಹಾಕಿಲ್ಲವೆಂದು ಕಂಡುಬಂದಿದ್ದಲ್ಲಿ, 34ನೇ ಪ್ರಕರಣವು ಜಾರಿಗೆ ಬರುತ್ತದೆ ಮತ್ತು ಸಾಕ್ಷ್ಯದಲ್ಲಿ ಅಂಥ ಪತ್ರದ ಅಂಗೀಕಾರಾರ್ಹತೆಯ ಮೇಲೆ ಸಂಪೂರ್ಣ ಪ್ರತಿಬಂಧಕಾಜ್ಞೆಯನ್ನು ಹೊರಡಿಸುತ್ತದೆ.

7. ***ಜವೇರ್ ಚಂದ್ ಮತ್ತು ಇತರರು –ವಿರುದ್ಧ– ಪುಖ್‌ರಾಜ್ ಸುರಾನಾ*** [1], ಮಾಡಲಾದ ಅಭಿಪ್ರಾಯೋಕ್ತಿಗಳನ್ನು ಪರಿಗಣಿಸಿದ ನಂತರ, ಸರ್ವೋಚ್ಚ ನ್ಯಾಯಾಲಯವು ***ರಾಮ್ ರತನ್ (ಮೃತ) ಕಾನೂನು ಪ್ರತಿನಿಧಿಗಳು –ವಿರುದ್ಧ– ಭಜರಂಗ್‌ಲಾಲ್ ಮತ್ತು ಇತರರು*** [2], ಪ್ರಕರಣದಲ್ಲಿ ಈ ಮುಂದಿನಂತೆ ತೀರ್ಮಾನಿಸಿದೆ:

> "6. ವಾದಿಯು ಕಟಕಟೆಯಲ್ಲಿರುವಾಗ, ದಸ್ತಾವೇಜನ್ನು ಸಾಕ್ಷ್ಯವನ್ನಾಗಿ ನೀಡಿದಾಗ, ಯುಕ್ತವಾಗಿ ಸ್ಟ್ಯಾಂಪು ಹಾಕಿರದ ಕಾರಣ ದಸ್ತಾವೇಜು ಸಾಕ್ಷ್ಯವಾಗಿ ಅಂಗೀಕಾರಾರ್ಹವಲ್ಲವೆಂದು ಪ್ರತ್ಯಪೀಲುದಾರರು ಆಕ್ಷೇಪವೆತ್ತಿರುತ್ತಾರೆ ಮತ್ತು ನೋಂದಣಿಯಾಗಬೇಕಿದ್ದಲ್ಲಿ, ಎತ್ತಲಾದ ಆಕ್ಷೇಪಣೆಗೆ ವಿವೇಚನಾಶಕ್ತಿಯನ್ನು ಬಳಸಿ ಕಾನೂನು ಪ್ರಕಾರ ಆಕ್ಷೇಪಣೆಯನ್ನು ಬಗೆಹರಿಸುವುದು

1. ಎಐಆರ್ 1961 ಎಸ್‌ಸಿ 1655
2. (1978) 3 ಎಸ್‌ಸಿಸಿ 236

ನ್ಯಾಯಾಧೀಶರ ಹೊಣೆಯಾಗಿರುತ್ತದೆ. ಕೆಲವು ಸಲ ಸಾಕ್ಷ್ಯವನ್ನು ದಾಖಲಿಸುವ ಪ್ರಕ್ರಿಯೆಯಲ್ಲಿ ಅಡಚಣೆಯನ್ನು ತಡೆಯಲು ನಿರ್ಣಯವನ್ನು ಮುಂದೂಡುವ ಪ್ರವೃತ್ತಿಯಿರುತ್ತದೆ ಮತ್ತು ಆದುದರಿಂದ, ಆಕ್ಷೇಪಣೆಗೊಳಪಟ್ಟ ಸಾಕ್ಷ್ಯದಲ್ಲಿ ದಸ್ತಾವೇಜನ್ನು ಗುರುತು ಮಾಡುವಾಗ ಬಹಳ ಅನುಕೂಲಕರ ವ್ಯವಸ್ಥೆಯನ್ನು ಅವಲಂಬಿಸಬೇಕಿರುತ್ತದೆ. ಹಾಗಿದ್ದರೂ, ಇದು, ಪತ್ರಕ್ಕೆ ಯುಕ್ತವಾಗಿ ಸ್ಟ್ಯಾಂಪು ಹಾಕಿಲ್ಲವೆಂಬುದು ನ್ಯಾಯಿಕವಾಗಿ ನಿರ್ಧಾರವಾಗಿರುವ ಕಾರಣದ ಮೇಲೆ ಅಂಗೀಕಾರಾರ್ಹವಲ್ಲವೆಂದು ಅರ್ಥೈಸಲಾಗುವುದಿಲ್ಲ. ಇದನ್ನು ಮುಂದೂಡಲಾಗಿದೆಯಷ್ಟೆ. ಇಂಥ ಸನ್ನಿವೇಶದಲ್ಲಿ, ತರುವಾಯದ ಹಂತದಲ್ಲಿ ದಾವೆಯು ಅಂತಿಮವಾಗಿ ವಿಲೆಯಾಗುವುದಕ್ಕೆ ಮುಂಚೆ ಆಕ್ಷೇಪಣೆಯನ್ನು ನಿರ್ಧರಿಸುವುದು, ಅದೇನೇ ಆಗಿದ್ದರೂ, ನ್ಯಾಯಾಲಯದ ಹೊಣೆಯಾಗಿರುತ್ತದೆ. ಪರ ವಿರೋಧದ ವಾದಗಳಿಗೆ ತನ್ನ ವಿವೇಚನೆಯನ್ನು ಬಳಸಿದ ನಂತರ, ಅಧಿವಿಚಾರಣಾ ನ್ಯಾಯಾಲಯವು ದಸ್ತಾವೇಜನ್ನು ಸಾಕ್ಷ್ಯವನ್ನಾಗಿ ಅಂಗೀಕರಿಸುತ್ತದೆ. ಸ್ಟ್ಯಾಂಪು ಅಧಿನಿಯಮದ 36ನೇ ಪ್ರಕರಣವು ಕಾರ್ಯಗತಗೊಳ್ಳುತ್ತದೆ ಹಾಗೂ ಅಂಗೀಕಾರವನ್ನು, ಪತ್ರಕ್ಕೆ ಯುಕ್ತವಾಗಿ ಸ್ಟ್ಯಾಂಪು ಹಾಕಿಲ್ಲವೆಂಬ ಕಾರಣದ ಮೇಲೆ ಆ ದಾವೆ ಅಥವಾ ವ್ಯವಹರಣೆಯ ಯಾವುದೇ ಹಂತದಲ್ಲಿ ಪ್ರಶ್ನಿಸಲಾಗದು. ನ್ಯಾಯಾಲಯವು, ಅಗತ್ಯವಿದ್ದಲ್ಲಿ, ಯುಕ್ತವಾಗಿ ಸ್ಟ್ಯಾಂಪು ಹಾಕಿಲ್ಲವೆಂಬ ಕಾರಣದ ಮೇಲೆ ದಸ್ತಾವೇಜಿನ ಅಂಗೀಕಾರಾರ್ಹತೆಯ ಬಗ್ಗೆ ಅಧಿವಿಚಾರಣಾ ನ್ಯಾಯಾಲಯದ

ಮುಂದೆ ಆಕ್ಷೇಪಣೆ ಮಾಡಿರುವುದನ್ನು, ದಸ್ತಾವೇಜನ್ನು ಸಾಕ್ಷ್ಯವನ್ನಾಗಿ ನೀಡಿದ ಕೂಡಲೇ ಮತ್ತು ಮೊಕದ್ದಮೆಯಲ್ಲಿ ಅದನ್ನು ನಿಶಾನೆಯನ್ನಾಗಿ ಗುರುತಿಸುವುದಕ್ಕೆ ಮುಂಚೆ ವಿಷಯವನ್ನು ನ್ಯಾಯಿಕವಾಗಿ ನಿರ್ಧರಿಸಬೇಕಿರುತ್ತದೆ ಹಾಗೂ ಅಂಗೀಕಾರಾರ್ಹತೆಯ ಪ್ರಶ್ನೆಗೆ ಸಂಬಂಧಿಸಿ, ನ್ಯಾಯಾಲಯವು ತನ್ನ ವಿವೇಚನೆಯನ್ನು ಬಳಸದೆ ದಸ್ತಾವೇಜನ್ನು ಅಜಾಗರೂಕತೆಯಿಂದ ಅಂಗೀಕರಿಸಲಾದ ಸಂದರ್ಭದಲ್ಲಿ 36ನೇ ಪ್ರಕರಣವನ್ನು ಅನ್ವಯಿಸುವ ದೃಷ್ಟಿಯಿಂದ ಪತ್ರವನ್ನು ಸಾಕ್ಷ್ಯವನ್ನಾಗಿ ಅಂಗೀಕರಿಸಲಾಗಿದೆಯೆಂದು ಹೇಳಲಾಗುವುದಿಲ್ಲ. (ಜವೇರ್ ಚಂದ್ –ವಿರುದ್ಧ– ಪುಖ್‌ರಾಜ್ ಸುರಾನಾ ಎಐಆರ್ 1961 ಎಸ್‌ಸಿ 1655ನ್ನು ನೋಡಿ). ಮಾನ್ಯ ಅಧಿವಿಚಾರಣಾ ನ್ಯಾಯಾಧೀಶರು ನೀಡಿದ ಹಿಂಬರಹದಲ್ಲಿ ''ಆಕ್ಷೇಪಿಸಲಾಗಿದೆ, ಆಕ್ಷೇಪಣೆಗಳಿಗೆ ಒಳಪಟ್ಟಂತೆ ಪುರಸ್ಕರಿಸಲಾಗಿದೆ'', ಎಂಬುದು, ಆಕ್ಷೇಪಣೆ ಎತ್ತಿದಾಗ ಅದು ನ್ಯಾಯಿಕವಾಗಿ ನಿರ್ಧಾರವಾಗಿಲ್ಲ ಮತ್ತು ದಸ್ತಾವೇಜನ್ನು ಕೇವಲ ಪರೀಕ್ಷಾರ್ಥವಾಗಿ ಗುರುತಿಸಲಾಗಿದೆ ಹಾಗೂ ಇಂಥ ಸಂದರ್ಭದಲ್ಲಿ ಪ್ರಕರಣ 36ನ್ನು ಅನ್ವಯಿಸಲಾಗುವುದಿಲ್ಲ ಎಂದು ಸ್ಪಷ್ಟವಾಗಿ ಸೂಚಿಸುತ್ತದೆ.

(ಒತ್ತು ನೀಡಲಾಗಿದೆ)

8. ***ರಿಯಾಜ್‌ಖಾನ್ ಮತ್ತು ಇತರರು –ವಿರುದ್ಧ– ಮೋದಿ ಮಹಮದ್ ಇಸ್ಮೈಲ್ ಮತ್ತು ಇತರರು*** [3]**,** ಪ್ರಕರಣದಲ್ಲಿ, ಈ ನ್ಯಾಯಾಲಯವು ಈ ಮುಂದಿನಂತೆ ತೀರ್ಮಾನಿಸಿದೆ:

3. ಐಎಲ್‌ಆರ್ 2002 ಕೆಎಆರ್ 3369

> "ದಸ್ತಾವೇಜನ್ನು ಸಾಕ್ಷ್ಯವನ್ನಾಗಿ ಅಂಗೀಕರಿಸುವುದಕ್ಕೆ ಆಕ್ಷೇಪಣೆ ವ್ಯಕ್ತವಾದಾಗ ಮತ್ತು ಅಂಥ ಆಕ್ಷೇಪಣೆಗಳಿಗೊಳಪಟ್ಟಂತೆ, ದಸ್ತಾವೇಜನ್ನು ಅಂಗೀಕರಿಸಲಾಗಿದೆ ಅಥವಾ ಗುರುತು ಮಾಡಲಾಗಿದೆ ಮತ್ತು ಎತ್ತಲಾದ ಆಕ್ಷೇಪಣೆಗಳನ್ನು ಆ ಹಂತದಲ್ಲಿ ನ್ಯಾಯಿಕವಾಗಿ ತೀರ್ಮಾನಿಸಿಲ್ಲ ಮತ್ತು ದಸ್ತಾವೇಜನ್ನು ಕೇವಲ ತಾತ್ಕಾಲಿಕವಾಗಿ ಗುರುತು ಮಾಡಿರುವುದನ್ನು ಹಾಗೂ ತರುವಾಯದ ಹಂತವಾಗಿ ಆಕ್ಷೇಪಣೆಯ ಮೇಲೆ ತೀರ್ಮಾನ ಕೈಗೊಳ್ಳುವುದು ಅನುಮತೀಯವಾಗಿಲ್ಲವೆಂದು ಅಥವಾ ಅಧಿಕಾರ ವ್ಯಾಪ್ತಿಯಲ್ಲಿ ಬರುವುದಿಲ್ಲವೆಂದು ಹೇಳಲಾಗದು. ಆಕ್ಷೇಪಣೆಯನ್ನು ಪರಿಗಣಿಸದಿರುವುದು ಮತ್ತು ಅದನ್ನು ಅಂಗೀಕರಿಸುವ ಹಂತದಲ್ಲಿ ದಸ್ತಾವೇಜನ್ನು ಗುರುತು ಮಾಡುವುದು ನ್ಯಾಯಾಲಯದ ತಪ್ಪಾಗಿದೆ ಹಾಗೂ ಅದಕ್ಕಾಗಿ ವ್ಯಾಜ್ಯಕಾರರು ತೊಂದರೆ ಅನುಭವಿಸುವಂತೆ ಮಾಡಕೂಡದು".
>
> (ಒತ್ತು ನೀಡಲಾಗಿದೆ)

9. ಮೇಲೆ ಗಮನಿಸಿದ ನಿರ್ಣಯಗಳಿಂದ, ದಸ್ತಾವೇಜಿಗೆ ಯುಕ್ತವಾಗಿ ಸ್ಟ್ಯಾಂಪು ಹಾಕಿಲ್ಲವೆಂಬ ಕಾರಣದ ಮೇಲೆ ದಸ್ತಾವೇಜಿನ ಅಂಗೀಕಾರಾರ್ಹತೆಗೆ ಸಂಬಂಧಿಸಿದಂತೆ ಆಕ್ಷೇಪಣೆ ಎತ್ತಿದಲ್ಲಿ, ಆಗಲೇ ಮತ್ತು ಅಲ್ಲೇ ಆಕ್ಷೇಪಣೆಯನ್ನು ನ್ಯಾಯಿಕವಾಗಿ ನಿರ್ಧರಿಸುವುದು ನ್ಯಾಯಾಲಯದ ಕರ್ತವ್ಯವಾಗಿರುತ್ತದೆಯೆಂದು ಸ್ಪಷ್ಟವಾಗಿದೆ. ಒಂದು ವೇಳೆ ದಸ್ತಾವೇಜನ್ನು, ತಪ್ಪಾಗಿ, ಗುರುತು ಮಾಡಿದ್ದರೂ ಸಹ, ಆಕ್ಷೇಪಣೆಗೊಳಪಟ್ಟಂತೆ, ಆ ದಸ್ತಾವೇಜನ್ನು ತಾತ್ಕಾಲಿಕವಾಗಿ ಗುರುತು ಮಾಡಲಾಗಿದೆಯೆಂದು ಅರ್ಥೈಸತಕ್ಕದ್ದು ಮತ್ತು ಗುರುತು ಮಾಡಿದ್ದಕ್ಕಾಗಿ ಮಾಡಲಾದ ಆಕ್ಷೇಪಣೆಯನ್ನು ನ್ಯಾಯಿಕವಾಗಿ ನಿರ್ಣಯಿಸಲಾಗಿಲ್ಲವೆಂದು ಹಾಗೂ ನ್ಯಾಯಾಲಯದ

ತಪ್ಪಿಗಾಗಿ, ಯಾರೇ ಪಕ್ಷಕಾರರಿಗೆ ತೊಂದರೆ ಮಾಡತಕ್ಕದ್ದಲ್ಲವೆಂದು ಹಾಗೂ ಅದನ್ನು ವಿಳಂಬ ಮಾಡದೆ ನಿರ್ಧರಿಸಲು ಅಗತ್ಯಪಡಿಸಲಾಗಿದೆಯೆಂದು ಹಾಗೂ ಯಾವುದೇ ಸಂದರ್ಭದಲ್ಲಿಯೂ ದಾವೆಯು ನಿರ್ಧಾರವಾಗುವುದಕ್ಕೆ ಮುಂಚೆಯೇ ಅದನ್ನು ನಿರ್ಧರಿಸತಕ್ಕದ್ದೆಂದು ಅರ್ಥೈಸಬೇಕು. ವಿಖ್ಯಾತ ಕಾನೂನು ಸೂತ್ರವಾದ 'ನ್ಯಾಯಾಲಯದ ಕಾರ್ಯದಿಂದ ಯಾರಿಗೂ ಬಾಧೆಯುಂಟಾಗತಕ್ಕುದಲ್ಲ' ಎಂಬುದನ್ನು ಗಮನದಲ್ಲಿಡತಕ್ಕದ್ದು.

10. ವಿಷಯುವನ್ನು ಎಚ್ಚರಿಕೆಯಿಂದ ಪರಿಶೀಲಿಸಿದ ಮೇಲೆ, ಈ ನ್ಯಾಯಾಲಯಕ್ಕೆ ಅಧಿವಿಚಾರಣಾ ನ್ಯಾಯಾಲಯ ಹಾಗೂ ಕೆಳ ಅಪೀಲು ನ್ಯಾಯಾಲಯ ಇವೆರಡೂ ಈ ಪ್ರಕರಣದಲ್ಲಿ ಗಂಭೀರ ತಪ್ಪನ್ನು ಎಸಗಿವೆಯೆಂಬುದು ಮನದಟ್ಟಾಗಿದೆ. ಅಧಿವಿಚಾರಣಾ ನ್ಯಾಯಾಧೀಶರು ಪ್ರತಿವಾದಿಯಿಂದ ಎತ್ತಲಾದ ಆಕ್ಷೇಪಣೆಗೆ ಎದುರಾಗಿ ದಾವೆಯ ದಸ್ತಾವೇಜನ್ನು ನಿಶಾನೆ ಪಿ.1 ಎಂಬುದಾಗಿ ಅಂಗೀಕರಿಸಬಾರದಾಗಿತ್ತು. ಎತ್ತಲಾದ ಆಕ್ಷೇಪಣೆಯನ್ನು ಸರ್ವೋಚ್ಚ ನ್ಯಾಯಾಲಯ ಮತ್ತು ಈ ನ್ಯಾಯಾಲಯ ನೀಡಿರುವ ನಿರ್ಣಯಗಳ ಸರಣಿಯಲ್ಲಿ ಕಾನೂನಿನ ಸ್ಥಾಪಿತ ಪ್ರತಿಪಾದನೆಯನ್ನು ಗಮನದಲ್ಲಿಟ್ಟುಕೊಂಡು, ಆಗಲೇ ಮತ್ತು ಅಲ್ಲೇ ನಿರ್ಧರಿಸಿರಬೇಕಿತ್ತು.

11. ಮೇಲೆ ಹೇಳಲಾದ ಅಂಶದ ಮೇಲೆ ಕೆಳ ಅಪೀಲು ನ್ಯಾಯಾಲಯದ ನಿರ್ಣಯವು ತದ್ವಿರುದ್ಧವಾದುದಾಗಿದೆ. ಪ್ರತಿವಾದಿ/ಅಪೀಲುದಾರನು ಮಂಡಿಸಿದ ವಾದವನ್ನು ಗಮನಕ್ಕೆ ತೆಗೆದುಕೊಂಡರೂ, ಅದನ್ನು ಉತ್ತರಿಸಿರುವುದಿಲ್ಲ. ಅಪೀಲು ಜ್ಞಾಪನ ಪತ್ರದಲ್ಲಿ ಎತ್ತಲಾದ ಮುಖ್ಯ ಆಧಾರಕ್ಕೆ ಸಂಬಂಧಿಸಿದಂತೆ ವಿವೇಚನೆಯನ್ನು ಬಳಸಿರುವುದಿಲ್ಲ ಹಾಗೂ ಪರ್ಯಾಲೋಚನೆಗಾಗಿ ಸಹ ಮಂಡಿಸಲಾಗಿದೆ. ಸದರಿ ಮುಖ್ಯ ಅಂಶವನ್ನು ನಿರ್ಧರಿಸದೆ ಅಪೀಲನ್ನು ನಿರ್ಧರಿಸಲಾಗಿದ್ದು, ಅದು ಕಾನೂನು ಬಾಹಿರವಾಗಿದೆ. ಹೀಗಾಗಿ, ಅಪೀಲುದಾರನು ಈ ವಿಷಯದಲ್ಲಿ ಅಧೀನ ನ್ಯಾಯಾಲಯಗಳು ಮುಂದುವರೆದಿರುವ ರೀತಿಯ ಬಗ್ಗೆ ಈ ಅಪೀಲಿನಲ್ಲಿ ಕಾನೂನು ತೊಂದರೆ ಅನುಭವಿಸಿರುತ್ತಾನೆ.

12. ಸಾಕ್ಷ್ಯವನ್ನಾಗಿ ನೀಡಿದ ಲಿಖಿತವನ್ನು ಪರಿಶೀಲಿಸುವ ಮತ್ತು ಪರಿಬದ್ಧಗೊಳಿಸುವ ವಿಷಯದಲ್ಲಿ ಅಧಿವಿಚಾರಣಾ ನ್ಯಾಯಾಧೀಶರಿಗೆ ವಹಿಸಿರುವ ಶಾಸನಬದ್ಧ ಕರ್ತವ್ಯವೆಂದರೆ, ಅದನ್ನು ಸಾಕ್ಷ್ಯವನ್ನಾಗಿ ಸ್ವೀಕರಿಸುವುದಕ್ಕೆ ಮುಂಚೆ, ಪ್ರತಿವಾದಿಯು ಆಕ್ಷೇಪಣೆ ಎತ್ತಿದ್ದರೂ, ಅಂದರೆ, ಅದಕ್ಕೆ ಸಾಕಷ್ಟು ಸ್ಟ್ಯಾಂಪನ್ನು ಹಾಕಿಲ್ಲವೆಂಬ ಆಧಾರದ ಮೇಲೆ ಅದನ್ನು ಗುರುತು ಮಾಡಿರುವ ಬಗ್ಗೆ, ಅದು ಪರಿಬದ್ಧಗೊಳಿಸಲು ತಕ್ಕುದಾಗಿದ್ದು, ಹೊಣೆಯಿಂದ ವಿಮೋಚನೆಗೊಳಿಸಿರುವುದಿಲ್ಲ. ಕನಿಷ್ಠ ಪಕ್ಷ ದಾವೆಯ ತರುವಾಯದ ಹಂತದಲ್ಲಾದರೂ ಆಕ್ಷೇಪಣೆಯನ್ನು ನಿರ್ಧರಿಸದೆ, ಮತ್ತು ಆಕ್ಷೇಪಿತ ದಸ್ತಾವೇಜಿನ ಮೇಲೆ ಮಾತ್ರವೇ ಅವಲಂಬಿಸಿದ್ದು, ನಿಶಾನೆ ಪಿ1 ಎಂಬುದಾಗಿ ಗುರುತಿಸಲಾಗಿದ್ದು, ದಾವೆಯನ್ನು ಡಿಕ್ರಿಗೊಳಿಸಲಾಗಿದೆ ಹಾಗೂ ಆದುದರಿಂದ, ಅಧಿನಿಯಮದ 34ನೇ ಪ್ರಕರಣದ ಉಲ್ಲಂಘನೆಯಾಗಿದೆ. ತದನುಸಾರವಾಗಿ, ಕಾನೂನಿನ ಗಣನಾರ್ಹ ಪ್ರಶ್ನೆಗೆ ಉತ್ತರಿಸಲಾಗಿದೆ.

13. ಈ ಹಂತದಲ್ಲಿ, ಮಾನ್ಯ ವಕೀಲರಾದ ಶ್ರೀ ಅಶೋಕ್ ಎಸ್. ಕಿಣಗಿಯವರು ಪ್ರತ್ಯಪೀಲುದಾರನಿಂದ ಸೂಚನೆಗಳನ್ನು ಪಡೆದು, ನಿಶಾನೆ ಪಿ.1ಕ್ಕೆ ಸಾಕಷ್ಟು ಸ್ಟ್ಯಾಂಪ್ ಹಾಕಿಲ್ಲವೆಂದು ಮತ್ತು ವಾದಿಯು ಕೊರತೆಯಿರುವ ಸ್ಟ್ಯಾಂಪ್ ಶುಲ್ಕವನ್ನು ಹಾಗೂ ದಂಡವನ್ನು ಪಾವತಿಸುವನೆಂದು ಒಪ್ಪಿದ್ದಾರೆ. ದಾವೆಯ ದಸ್ತಾವೇಜನ್ನು ಸಾಕಷ್ಟು ಮೌಲ್ಯದ ಸ್ಟ್ಯಾಂಪ್ ಪೇಪರ್ ಮೇಲೆ ಬರೆದಿಲ್ಲವೆಂಬುದರಲ್ಲಿ ಯಾವುದೇ ವಿವಾದವಿಲ್ಲದ್ದರಿಂದ ಲಿಖಿತವನ್ನು ಪರಿಬದ್ಧಗೊಳಿಸಲಾಗಿರುತ್ತದೆ.

14. ಸದರಿ ಲಿಖಿತ ಪತ್ರವನ್ನು ಸಾಕ್ಷ್ಯವನ್ನಾಗಿ ನೀಡಿದಾಗ ಮತ್ತು ಸಾಕ್ಷ್ಯವನ್ನಾಗಿ ಸ್ವೀಕರಿಸುವುದಕ್ಕೆ ಮುಂಚೆ ಅದರ ಮೇಲೆ ಎತ್ತಲಾದ ಆಕ್ಷೇಪಣೆಯನ್ನು ನಿರ್ಧರಿಸದಿರುವಲ್ಲಿ ಅಧಿವಿಚಾರಣಾ ನ್ಯಾಯಾಧೀಶರ ತಪ್ಪು ಗ್ರಹಿಕೆಗೆ ಪಕ್ಷಕಾರರನ್ನು ಬಾಧಿತರನ್ನಾಗಿ ಮಾಡಲಾಗದು. ಸದರಿ ದಸ್ತಾವೇಜು ಸಾಕ್ಷ್ಯದಲ್ಲಿ ಅಂಗೀಕಾರಾರ್ಹವಲ್ಲದ ಕಾರಣ ಮತ್ತು ಸಾಕ್ಷ್ಯದಲ್ಲಿ ಸಾಕಷ್ಟು ಸ್ಟ್ಯಾಂಪ್ ಹಾಕಿರದ ಅಂಥ ದಸ್ತಾವೇಜನ್ನು ಅಂಗೀಕರಿಸಲು ಸಂಪೂರ್ಣ ನಿಷೇಧವಿರುವ ಕಾರಣ ಹಾಗೂ

ಕೊರತೆಯಿರುವಷ್ಟು ಸ್ಟ್ಯಾಂಪ್ ಶುಲ್ಕ ಹಾಗೂ ದಂಡನೆಯನ್ನು ಅಧಿವಿಚಾರಣಾ ನ್ಯಾಯಾಲಯದಲ್ಲೇ ಪಾವತಿಸಲಾಗುವುದೆಂದು ಮಾಡಲಾದ ನಿವೇದನೆಯ ದೃಷ್ಟಿಯಿಂದ, ವರದಿಯಾದ ***ದಿಗಂಬರ್‌ವರ್ತಿ –ವಿರುದ್ಧ– ಜಿಲ್ಲಾ ರಿಜಿಸ್ಟ್ರಾರ್, ಬೆಂಗಳೂರು ನಗರ ಜಿಲ್ಲೆ*** [4], – ಪ್ರಕರಣದಲ್ಲಿ ಸೂಚಿಸಲಾದ ಕಾರ್ಯ ವಿಧಾನವನ್ನು ದೃಷ್ಟಿಯಲ್ಲಿಟ್ಟುಕೊಂಡು ಮುಂದುವರೆಯಲು, ಮೊಕದ್ದಮೆಯನ್ನು ಪುನರ್ ವಿಚಾರಣೆಗಾಗಿ ವಾಪಸ್ಸು ಕಳುಹಿಸಲಾಗಿದೆ.

ಫಲಿತಾಂಶವಾಗಿ, ಅಪೀಲನ್ನು ಪುರಸ್ಕರಿಸಲಾಗಿದೆ ಮತ್ತು ಅಧೀನ ನ್ಯಾಯಾಲಯಗಳು ಹೊರಡಿಸಿದ ಪ್ರಶ್ನಿತ ಡಿಕ್ರಿಗಳನ್ನು ಬದಿಗಿರಿಸಲಾಗಿದೆ. ದಾವೆಯ ದಸ್ತಾವೇಜನ್ನು ಸಾಕ್ಷ್ಯದಲ್ಲಿ ಸ್ವೀಕರಿಸುವುದಕ್ಕೆ ಪ್ರತಿವಾದಿಯಿಂದ ಆಕ್ಷೇಪಣೆ ಎತ್ತಲಾದ ಹಂತದಲ್ಲಿ, ಅಂದರೆ, 01.07.2010ರಂದು ವ್ಯವಹರಣೆಗಾಗಿ ದಾವೆಯನ್ನು ಅಧಿವಿಚಾರಣಾ ನ್ಯಾಯಾಲಯಕ್ಕೆ ವಾಪಸ್ಸು ಕಳುಹಿಸಲಾಗಿದೆ. ಅಧಿವಿಚಾರಣಾ ನ್ಯಾಯಾಲಯವು ಪ್ರಕರಣದೊಂದಿಗೆ ಕಾನೂನಿನ ಅನುಸಾರವಾಗಿ ಮುಂದುವರೆಯತಕ್ಕದ್ದು.

ದಿನಾಂಕ 14.08.2013ರಂದು ಹೊರಡಿಸಲಾದ ಮಧ್ಯಕಾಲೀನ ಆದೇಶವನ್ನನುಸರಿಸಿ, ಪ್ರತಿವಾದಿಯು ದಿನಾಂಕ 11.09.2013ರಂದು ಅಧಿವಿಚಾರಣಾ ನ್ಯಾಯಾಲಯದಲ್ಲಿ 1,35,500/– ರೂ.ಗಳನ್ನು ಠೇವಣಿ ಮಾಡಿರುತ್ತಾನೆ. ಸದರಿ ಮೊತ್ತವನ್ನು ಅಧಿವಿಚಾರಣಾ ನ್ಯಾಯಾಲಯವು ಯಾವುದೇ ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿ ಒಂದು ವರ್ಷದ ಅವಧಿಗಾಗಿ ನಿಶ್ಚಿತ ಠೇವಣಿಯಲ್ಲಿ ಹೂಡಿಕೆ ಮಾಡತಕ್ಕದ್ದು. ದಾವೆಯ ಅಂತಿಮ ನಿರ್ಣಯವು ಪ್ರಾಪ್ತವಾದ ಬಡ್ಡಿಯೊಂದಿಗೆ ಠೇವಣಿಯಲ್ಲಿನ ಮೊತ್ತದ ಸಂದಾಯವನ್ನು ವಿನಿಯಮಗೊಳಿಸತಕ್ಕದ್ದು. ದಾವೆಯನ್ನು ಶೀಘ್ರವಾಗಿ ಮತ್ತು ಮುಂದಿನ ಸುನಾವಣೆ ದಿನಾಂಕದಿಂದ ಆರು ತಿಂಗಳ ಅವಧಿಯೊಳಗಾಗಿ ನಿರ್ಧರಿಸತಕ್ಕದ್ದು.

4. (2013) 4 ಕೆಎಲ್‌ಜೆ 247

ಎರಡೂ ಪಕ್ಷಕಾರರಿಗೆ ದಿನಾಂಕ 02.01.2016ರಂದು ಅಧೀನ ವಿಚಾರಣಾ ನ್ಯಾಯಾಲಯದ ಮುಂದೆ ಹಾಜರಾಗಲು ಮತ್ತು ಮುಂದಿನ ಆದೇಶಗಳನ್ನು ಸ್ವೀಕರಿಸಲು ನಿರ್ದೇಶಿಸಲಾಗಿದೆ.

ಕರ್ನಾಟಕ ನ್ಯಾಯಾಲಯ ಶುಲ್ಕಗಳು ಮತ್ತು ದಾವೆಗಳ ಮೌಲ್ಯ ನಿರ್ಣಯ ಅಧಿನಿಯಮ, 1958ರ 64(1)ನೇ ಪ್ರಕರಣದ ಅನುಸಾರ ನ್ಯಾಯಾಲಯ ಶುಲ್ಕವನ್ನು, ಅಧೀನ ನ್ಯಾಯಾಲಯದಲ್ಲಿ ದಾಖಲಿಸಿರುವ ಈ ಅಪೀಲಿನ ಹಾಗೂ ನಿಯತ ಅಪೀಲಿನ ಆಧಾರದ ಮೇಲೆ, ಅಪೀಲುದಾರನಿಗೆ ಮರುಪಾವತಿಸಲಾಗುವುದು.

---